## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ-183 ಚಿಕ್ಕಲ್ಲಸಂದ್ರ, ಬೆಂಗಳೂರು

ಸಂ: ಸ.ಅ/ವಾ-183/ಪಿ.ಆರ್/03/2021-22 ದಿನಾಂಕ : 21-05-2021

### ವಾರ್ಡ್ ಸಮಿತಿ (WDC) ವಾರ್ಡ್ ಸಂಖ್ಯೆ-183 ಚಿಕ್ಕಲ್ಲಸಂದ್ರ ವಾರ್ಡ್‌ನ ದಿನಾಂಕ :21-05-2021 ರಂದು ನಡೆದ ಸಭೆಯ ನಡವಳಿಗಳು

ವಿಷಯ:- ವಾರ್ಡ್ ಸಂಖ್ಯೆ-183 ಚಿಕ್ಕಲ್ಲಸಂದ್ರ ಕೆ.ಇ.ಬಿ ಮುಖ್ಯರಸ್ತೆಯಲ್ಲಿರುವ ಯೋಗ ಕೇಂದ್ರದಲ್ಲಿ ನಡೆದ ವಾರ್ಡ್ DETER ಸಮಿತಿ (WDC)ಸಭೆಯ ನಡವಳಿ.

ಉಲ್ಲೇಖ:-1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ :ಸಂ RD 158 TNR 2020 ದಿನಾಂಕ :07-05-2021

******

ಉಲ್ಲೇಖ (1) ರ ಸಭಾ ಸೂಚನಾ ಪತ್ರದ ಅನುಸಾರ ಆದೇಶದ ಅಂಶಗಳನ್ನು ಪಾಲಿಸಲು ವಾರ್ಡ್ ಕಮಿಟಿ ಸಭೆ ನಿಗಧಿಪಡಿಸಿ ದಿನಾಂಕ :21-05-2021 ರಂದು ವಾರ್ಡ್ ಸಮಿತಿ ಸಂಚಾಲಕರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಪದ್ಮನಾಭನಗರ ಉಪ ವಿಭಾಗ ಹಾಗೂ ವಾರ್ಡ್ ಸಂಖ್ಯೆ-183 ರವರಾದ ಶ್ರೀ ಚೇತನ್ ಎನ್ ಎಸ್ ನಾಯಕ್ ರವರು ಪ್ರಾರಂಭದಲ್ಲಿ ಉಪಸ್ಥಿತರಿದ್ದ ನೋಡೆಲ್ ಅಧಿಕಾರಿ ಮತ್ತು ವಾರ್ಡ್ ಸಮಿತಿಯ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳು, ರೆಸಿಡೆನ್ಸ್ ವೆಲ್‌ಫೇರ್ ಆಸೋಸಿಯೇಶನ್ ಹಾಗೂ ಸಾರ್ವಜನಿಕರನ್ನು ಸ್ವಾಗತ ಕೋರಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು

ಸಭೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರು ಹಾಜರಿರುತ್ತಾರೆ.

ಶ್ರೀ ನರಸಿಂಹಶಾಸ್ತ್ರೀ ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರೊಂದಿಗೆ ಮಾತನಾಡಿ ವಾರ್ಡ್ ಮಟ್ಟದಲ್ಲಿ ಕೋವಿಡ್-19 ಅನ್ನು ನಿಯಂತ್ರಿಸಲು ಸರ್ಕಾರದ ಆದೇಶದಂತೆ DETER ಸಮಿತಿ (WDC) ರಚಿಸಲಾಗಿದ್ದು, ವಾರ್ಡ್ ಮಟ್ಟದಲ್ಲಿ ಕೋವಿಡ್ ನಿಯಂತ್ರಿಸಲು ವಾರ್ಡ್ ಕೋವಿಡ್ ಸ್ವಯಂ ಸೇವಕನ್ನಾಗಿ ನೇಮಿಸಿಕೊಳ್ಳಲು ಸೂಚಿಸಿರುತ್ತಾರೆ ಹಾಗೂ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 2 ಟ್ರಿಯಾಜ್ ಸೆಂಟರ್‌ಗಳನ್ನು ಪ್ರಾರಂಭಿಸಲು ಉಲ್ಲೇಖ (1) ರಲ್ಲಿ ಸೂಚಿಸಿರುವ ಮೇರೆಗೆ ಹೊಸಕೆರೆಹಳ್ಳಿಯಲ್ಲಿ ಹೊಸದಾಗಿ ನಿರ್ಮಿಸಿರುವ ಆಸ್ಪತ್ರೆಯಲ್ಲಿ ಆಮ್ಲಜನಕ ಸಹಿತ ಇರುವ 40 ಹಾಸಿಗೆಯುಳ್ಳ ಟ್ರಿಯಾಜ್ ಸೆಂಟರ್ ಹಾಗೂ ಕೋವಿಡ್ ಸ್ಥಿರೀಕರಣ ಘಟಕವನ್ನು ಹಾಗೂ ಕುಮಾರಸ್ವಾಮಿ ಬಡಾವಣೆಯ ಸಾಗರ್ ಆಸ್ಪತ್ರೆ ಎದುರು ಒಂದು ಟ್ರಿಯಾಜ್ ಸೆಂಟರ್ ಒಟ್ಟು 2 ಟ್ರಿಯಾಜ್ ಸೆಂಟರ್ ಆಸ್ಪತ್ರೆಗಳನ್ನು ಮಾನ್ಯ ಕಂದಾಯ ಸಚಿವರು ಹಾಗೂ ಕ್ಷೇತ್ರದ ಶಾಸಕರುವರು ಅಧ್ಯಕ್ಷತೆಯಲ್ಲಿ ಸ್ಥಳೀಯ ನಿವಾಸಿಗಳು ಅನುಕೂಲ ಮಾಡಿಕೊಟ್ಟಿರುವ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ

Scanned by CamScanner

ವಾರ್ಡ್‌ನ ಕಾರ್ಯದರ್ಶಿಗಳು ನೋಡಲ್ ಅಧಿಕಾರಿಯವರಿಗೆ ವಾರ್ಡ್ ಸಮಿತಿ ಸಭೆಯಲ್ಲಿ ತಿಳಿಸಿದಾಗ ಪ್ರಶಂಸೆಯನ್ನು ವ್ಯಕ್ತಪಡಿಸಿರುತ್ತಾರೆ.

ವಾರ್ಡ್‌ನ ಕೆ.ಇ.ಬಿ ಮುಖ್ಯರಸ್ತೆಯಲ್ಲಿರುವ ಯೋಗ ಕೇಂದ್ರದಲ್ಲಿ ಲಸಿಕೆಯನ್ನು ನೀಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಅರ್ಹರ 44 ವರ್ಷಕ್ಕಿಂತ ಮೇಲ್ಪಟ್ಟ ಸಾರ್ವಜನಿಕರು ಲಸಿಕೆ ಪಡೆಯುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ವಾರ್ಡ್ ಸಂಖ್ಯೆ-183 ರ ಪ್ರದೇಶವು ಚಿಕ್ಕ ವಾರ್ಡ್ ಪ್ರದೇಶವಾಗಿದ್ದು, ಈ ವಾರ್ಡ್‌ನಲ್ಲಿ 1 ಚಿಕ್ಕ ಆಸ್ಪತ್ರೆಯಿದ್ದು ಈ ವಾರ್ಡ್‌ನ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದ್ದು, ಈ ಪ್ರದೇಶದಲ್ಲಿರುವ ಕ್ಲಿನಿಕ್‌ಗಳ ವಿವರಗಳನ್ನು ಪಡೆಯುವಂತೆ ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಯವರು ಹಿರಿಯ ಆರೋಗ್ಯ ಪರಿವೀಕ್ಷರೊಂದಿಗೆ ಮಾತನಾಡಿ ವಾರ್ಡ್ ಪ್ರದೇಶದಲ್ಲಿರುವ ಕ್ಲಿನಿಕ್‌ಗಳ ವಿವರಗಳನ್ನು ಪಡೆದು ಕ್ಲಿನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುವ ಡಾಕ್ಟರ್‌ಗಳೊಂದಿಗೆ ಮಾತನಾಡಿ ಕೋವಿಡ್ ಚಿಕಿತ್ಸೆಗೆ ದೂರವಾಣಿ ಮುಖಾಂತರ ಸಾರ್ವಜನಿಕರಿಗೆ ಅವಶ್ಯವಿರುವ ಸಲಹೆಗಳನ್ನು ನೀಡಲು ಮತ್ತು ಸ್ವಯಂ ನಿರ್ಧಾರ ಮಾಡುವ ಬಗ್ಗೆ ತಿಳಿಸಿದ್ದರ ಮೇರೆಗೆ ವಾರ್ಡ್‌ನಲ್ಲಿರುವ ಸಾರ್ವಜನಿಕರಿಗೆ ತುರ್ತು ಚಿಕಿತ್ಸೆಯಿಂದ ಸಾರ್ವಜನಿಕರಿಗೆ ಅನುಕೂಲವಾಗಿವುದೆಂದು ತಿಳಿಸಿದ್ದರ ಮೇರೆಗೆ ಡಾಕ್ಟರ್‌ಗಳ ಜೊತೆ ಚರ್ಚಿಸಿ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಅವರವರ ದೂರವಾಣಿ ಸಂಖ್ಯೆಗಳನ್ನು ನಮೂದಿಸಿ ಅಲ್ಲಲ್ಲಿ ಪ್ರಚರ ಪಡಿಸಿದ್ದಲ್ಲಿ ಸಾರ್ವಜನಿಕರಿಗೆ ಮಾಹಿತಿ ನೀಡಿ ಧೈರ್ಯ ತುಂಬಿದ್ದಲ್ಲಿ ಸಾರ್ವಜನಿಕರಿಗೆ ಅನುಕೂಲಕರವಾಗುವುದೆಂದು ವಾರ್ಡ್ ಸಮಿತಿ ಸಭೆಗೆ ತಿಳಿಸಿದರು.

ವಾರ್ಡ್ ಸಂಖ್ಯೆ-183 ಚಿಕ್ಕಲ್ಲಸಂದ್ರದಲ್ಲಿರುವ ಕ್ಲಿನಿಕ್‌ಗಳ ವಿವರ ಈ ಕೆಳಕಂಡಂತಿದೆ.

| Sl No | Clinic Name | Mobile No |
|---|---|---|
| 1 | Clinic Preemasree, Dr// Premakumari | 7353016268 |
| 2 | S C Children Clinic | 9845177805 |
| 3 | Gayathri Clinic | 9986023697 |
| 4 | Clinic Hopebery Dr Arjun Child Clinic | 9108585033 |
| 5 | Clinic Astha Denma Centre | 9886244455 |

ಕೋವಿಡ್-19 3ನೇ ಅಲೆಯು ಹರಡಬಹುದೆಂಬ ತಜ್ಞರ ಸಲಹೆಯಂತೆ ಮುಂಜಾಗ್ರತಾ ಕ್ರಮ ವಹಿಸಲು ಈಗಾಗಲೇ ವಾರ್ಡ್ ಸಂಖ್ಯೆ-161 ರಲ್ಲಿ ನಿರ್ಮಿಸಲಾಗುತ್ತಿರುವ ಸಮುದಾಯ ಭವನವನ್ನು ಮಕ್ಕಳ ಕೋವಿಡ್ ಸ್ಥಿರೀಕರಣ ಕೇಂದ್ರವಾಗಿ (ಆಮ್ಲಜನಕ ಸಹಿತ) ಮಾರ್ಪಾಡು ಮಾಡುವ ಬಗ್ಗೆ ಚರ್ಚೆ ಕಾರ್ಯ ರೂಪಕ್ಕೆ ತರಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದ್ದು, ಸದರಿ ಕಾಮಗಾರಿಯು ಪ್ರಗತಿಯಲ್ಲಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು ಪದ್ಮನಾಭನಗರ ಉಪ ವಿಭಾಗರವರು ವಾರ್ಡ್ ಸಮಿತಿ ಸಭೆಗೆ ವಿವರಿಸಿರುತ್ತಾರೆ ಮತ್ತು ಶೀಘ್ರವಾಗಿ

Scanned by CamScanner

ಬೋರ್‌ವೆಲ್ ಒಮನ್ನು ಅಳವಡಿಸಿಕೊಡುವಂತೆ ನೋಡಲ್ ಅಧಿಕಾರಿಯವರು ಸೂಚಿರುವ ಮೇರೆಗೆ ಇನ್ನು ಒಂದು ದಿನದೊಳಗೆ ಬೋರ್‌ವೆಲ್ ಅಳವಡಿಸಿವುದಾಗಿ ಸಭೆಗೆ ತಿಳಿಸಿದರು. ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸದಸ್ಯರಿಗೂ ಹಾಗೂ ಅಧಿಕಾರಿಗಳಿಗೂ ವಮನೆಯನ್ನು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ಸಂಚಾಲಕರು

ವಾರ್ಡ್ 183 ರ ನೋಡಲ್ ಅಧಿಕಾರಿ.

Scanned by CamScanner